ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 2

(ದಿನಾಂಕ 09-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ಕೆ ವಕೀಲರಿಂದಃ-

ನಾನು ಈ ಹಿಂದೆ ಈ ದಾವೆಯಲ್ಲಿ ಹೇಳಿರುವ ಸಾಕ್ಷ್ಯ ನನಗೆ ನೆನಪಿದೆ. ಪ್ರತಿವಾದಿಯ ತಾಯಿಯ ಹೆಸರಿನಲ್ಲಿ ಕೇವಲ 8 ಎಕರೆ 6 ಸೆಂಟ್ಸ ಜಮೀನಿನ ಬಗ್ಗೆ ಜಂಟಿ ಪಹಣಿ ಇತ್ತು ಎಂದರೆ ಸರಿ. ಅಖಂಡಿ ಈರಮ್ಮ ಇವರ ಹೆಸರಿನಲ್ಲಿಯೂ ಸಹಾ 6 ಎಕರೆ ಜಂಟಿ ಪಹಣಿ ಇದೆ ಎಂದರೆ ಸರಿ. ನಮ್ಮ ತಾಯಿಯವರು ಸನ್ 1974 ರಲ್ಲಿ ಪಂಪನಗೌಡ್ರ ಮಲ್ಲಮ್ಮ ಇವರಿಂದ 12 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ. ನಮ್ಮ ತಾಯಿ ಜಮೀನು ಖರೀದಿ ಮಾಡುವ ಸಮಯದಲ್ಲಿ ಸದರಿ ಜಮೀನು ಮಲ್ಲಮ್ಮ ಇವರ ಹೆಸರಿನಲ್ಲಿ ಪಹಣಿ ದಾಖಲೆ ಇರಲಿಲ್ಲವೆಂದರೆ ಸರಿಯಲ್ಲ. ನನ್ನ ತಾಯಿಯವರು ಜಮೀನು ಖರೀದಿಸಿರುತ್ತಾರಂತಾ ಹೇಳುವ ಸಮಯದಲ್ಲಿ ಸದರಿ ಜಮೀನಿನ ಪಹಣಿ ಮಲ್ಲಮ್ಮ ಮತ್ತು ಅವರ ಮಗ ಮಂಜುನಾಥ ಇವರ ಹೆಸರಿನಲ್ಲಿರಲಿಲ್ಲ ನಾನು ಸುಳ್ಳು ಹೇಳುತಿತದ್ದೇನೆಂದರೆ ಸರಿಯಲ್ಲ. ನಮ್ಮ ತಾಯಿಯವರು ಜಮೀನು ಖರೀದಿಸಿರುವ ಖರೀದಿ ಪತ್ರದಲ್ಲಿ ಜಮೀನಿನ ಚಕ್ಕುಬಂದಿ ಏನು ನಮೂದು ಇದೆ ಎಂದು ನನಗೆ ಗೊತ್ತು. ಸದರಿ ಚಕ್ಕುಬಂದಿ ಪೂಃ ದಾರಿ, ಪಃ ಈರಮ್ಮ ಇವರ ಜಮೀನು, ಉಃ ದಾರಿ ಹಾಗೂ ದಃ ಶಾಶ್ವತಯ್ಯ ಇವರ ಜಮೀನು. ಸದರಿ ಖರೀದಿ ಪತ್ರದಲ್ಲಿ ಪೂಃಮಲ್ಲಪ್ಪನ ಜಮೀನು ಅಂತಾ ನಮೂದು ಇದೆ ಎಂದರೆ ಸರಿ. ಪಃ ಕೊಟ್ರಪ್ಪ ಇವರ ಜಮೀನು ಅಂತಾ ನಮೂದು ಇದೆ ಎಂದರೆ ಸರಿ. ಉಃದಾರಿ ಅಂತಾ ನಮೂದು ಇದೆ ಎಂದರೆ ಸರಿ. ದಃ ಗೌರಮ್ಮ ಇವರ ಜಮೀನು ಅತಾ ನಮೂದು ಇದೆ ಎಂದರೆ ಸರಿ. ನಮ್ಮ ತಾಯಿಯವರು ಜಮೀನು ಖರೀದಿಸುವ ಸಮಯದಲ್ಲಿ ಸದರಿ ಜಮೀನಿನ ಯಾವುದೇ ದಿಕ್ಕಿಗೆ ಪ್ರತಿವಾದಿಯ ಜಮೀನು ಬರುವುದಿಲ್ಲವೆಂದರೆ ಸರಿ. ಆ ಕಾರಣದಿಂದಾಗಿ ಪ್ರತಿವಾದಿ ನಮ್ಮ ಜಮೀನನ್ನು ಒತ್ತು ಮಾಡುವ ಪ್ರಶ್ನೆಯೇ ಬರುವುದಿಲ್ಲವೆಂದರೆ ಸರಿಯಲ್ಲ.

ನಾನು ವ್ಯವಸಾಯ ಮಾಡುತ್ತೇನೆ. ನನಗೆ ವ್ಯವಸಾಯ ಬಿಟ್ಟು ಬೇರ್ಯಾವುದೇ ಕೆಲಸ ಬರುವುದಿಲ್ಲ. ನಮ್ಮ ಊರಿನಲ್ಲಿ ನನಗೆ ಭೋಜಪ್ಪದವರು ಅಂತಾಲೂ ಕರೆಯುತ್ತಾರೆಂದರೆ ಸರಿ. ನಾನು ಮೊದಲಿನಿಂದಲೂ ದಾವಾ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಬಂದಿರುತ್ತೇನೆಂದರೆ ಸರಿ. ಪ್ರತಿವಾದಿ ಸಹಾ ಅದೇ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಬಂದಿರುತ್ತಾನೆಂದರೆ ಸರಿ. ದಾವಾ ಜಮೀನು ಅಳತೆ ಮಾಡಲು ಅರ್ಜಿಯನ್ನು ನಾನೇ ಕೊಟ್ಟಿದ್ದೇನೆ. ನಾನು ಅರ್ಜಿಯನ್ನು ಸನ್ 2020-2023 ರಲ್ಲಿ ಕೊಟ್ಟಿದ್ದೇನೆ. ಸದರಿ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸರ್ವೆ ಕಾಲಕ್ಕೆ ಅಖಂಡಿ ಈರಮ್ಮ ಹಾಜರಿರಲಿಲ್ಲ ಅವರ ಮಗ ಹಾಜರಿದ್ದ.

ಅವನ ಹೆಸರು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅವಳ ಮಗ ಸಹಾ ಬಂದಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಜಮೀನಿನಲ್ಲಿ ಒಂದು ಬಾವಿ ಇದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಬಾವಿ ಇರುವುದರಿಂದ ಸರ್ವೆ ಕಾರ್ಯ ಮಾಡಲಿಲ್ಲ ಅದನ್ನು ಬಾಕಿ ಇಟ್ಟಿರುತ್ತಾರೆಂದರೆ ಸರಿಯಲ್ಲ. ಬಾವಿ ಇರುವ ಕಾರಣದಿಂದ ಸರ್ವೆ ಅರ್ಜಿಯನ್ನು ವಿಲೇ ಇಟ್ಟಿರುತ್ತಾರೆ ಆದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ವರದಿಯಲ್ಲಿ ಪ್ರತಿವಾದಿಯು ನಮ್ಮ ಜಮೀನಿನ ಒತ್ತುವರಿ ಮಾಡಿರುತ್ತಾರಂತಾ ಬರೆದಿರುವುದಿಲ್ಲವೆಂದರೆ ಸರಿಯಲ್ಲ.

ನಮ್ಮ ಜಮೀನಿನ ಪೂರ್ವಕ್ಕೆ ಮತ್ತು ಪ್ರತಿವಾದಿಯ ಜಮೀನಿನ ಪಶಿಚಮ ದಿಕ್ಕಿಗೆ ಅಂದರೆ ಪ್ರತಿವಾದಿ ಮತ್ತು ನಮ್ಮ ಜಮೀನಿನ ಮಧ್ಯ ಒಂದು ದೊಡ್ಡ ಬದು ಇದೆ ಎಂದರೆ ಸರಿ. ಸದರಿ ಬದು ಹಳೇ ಕಾಲದ್ದು ಎಂದರೆ ಸರಿ. ಸದರಿ ಬದುವಿನ ಮೇಲೆ ಗಿಡಗಳು ಬೆಳೆದಿರುತ್ತವೆಂದರೆ ಸರಿ. ಈಗ ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಶಾಶ್ವತಯ್ಯ ಮತ್ತು ಅವರ ಮಕ್ಕಳ ಜಮೀನು ಇದೆ. ಸದರಿ ಶಾಶ್ವತಯ್ಯ ಇವರ ಮಗ ಪಂಪಾಪತಿ ಇವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಹನುಮಪ್ಪ ಮತ್ತು ಬಸಪ್ಪ ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಬರುತ್ತಾರೆ. ಸರ್ವೆ ಕಾಲಕ್ಕೆ ಪಂಪಾಪತಿ, ಹನುಮಪ್ಪ ಹಾಜರಿರಲಿಲ್ಲ, ಬಸಪ್ಪ ಹಾಜರಿದ್ದ.

ಕಲ್ಲಳ್ಳಿ ಬಸಪ್ಪ ಇವರ ಮೂಲಕ ಪುರುಷನ ಹೆಸರು ಕೆಂಚಪ್ಪ ಮತ್ತು ಕಲ್ಲಳ್ಳಿ ಕಳಸಪ್ಪನವರ ಮಗ ನಿಂಗಪ್ಪ ಎಂದರೆ ಸರಿ. ಪ್ರತಿವಾದಿಯರ ವಂಶಸ್ಥರು ದಿಃ 26-11-1946 ರಂದು ಸರ್ವೆ ನಂ.219/ಎಫ್ ರಲ್ಲಿ 10 ಎಕರೆ ಜಮೀನನ್ನು ಉಪ್ಪಾರ ಭೀಮವ್ವ ಇವರಿಂದ ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ವಂಶಸ್ಥರು ಸದರಿ ಜಮೀನನ್ನು ಭೀಮವ್ವ ಇವರಿಂದ ಖರೀದಿಸಿರುವ ವಿಚಾರ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರದ ಬಗ್ಗೆ ಇ ಸಿ ಯಲ್ಲಿ ಮತ್ತು ಪಹಣಿಯಲ್ಲಿ ನಮೂದು ಇದೆ ಇದು ನನಗೆ ಗೊತ್ತು ಎಂದರೆ ಸರಿಯಲ್ಲ. ನಿಂಗಪ್ಪ ಇವರು ಸದರಿ 10 ಎಕರೆ ಜಮೀನಿನಲ್ಲಿ ತಮ್ಮ ಜೀವಿತಾವಧಿಯವರೆಗೆ ಸ್ವಾಧೀನದಲ್ಲಿದ್ದರು ಎಂದರೆ ಸರಿ. ಸದರಿ ನಿಂಗಪ್ಪ ಇವರ ಮರಣದ ನಂತರ ಸದರಿ 10 ಎಕರೆ ಜಮೀನು ಪ್ರತಿವಾದಿಯ ತಾಯಿ ನಿಂಗಮ್ಮ ಇವರ ಹೆಸರಿಗೆ ದಾಖಲಾಯಿತು ಎಂದರೆ ಸರಿಯಲ್ಲ. ಸನ್ 2000-01 ನೇ ಸಾಲಿನಲ್ಲಿ ಕೈಬರಹ ಪಹಣಿಯಲ್ಲಿ ಕಣ್ತಪ್ಪಿನಿಂದ 10 ಎಕರೆ ಬದಲಾಗಿ 8 ಎಕರೆ 6 ಸೆಂಟ್ಸ ಅಂತಾ ಪ್ರತಿವಾದಿಯ ತಾಯಿ ಹೆಸರಿಗೆ ದಾಖಲಾಯಿತು ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿ ಅನಕ್ಷರಸ್ಥಳಾಗಿರುವುದರಿಂದ ಸದರಿ ವಿಚಾರ ಅವಳಿಗೆ ತಿಳಿಯದೆ

ಹೋಗಿರುತ್ತದೆ ಆದರೆ ಅವಳು 10 ಎಕರೆ ಜಮೀನಿನ ಸ್ವಾಧೀನದಲ್ಲಿರುತ್ತಾಳೆಂದರೆ ಸರಿಯಲ್ಲ. ಪ್ರತಿವಾದಿಯು ಈಗಲೂ ಸಹಾ 10 ಎಕರೆ ಜಮೀನಿನ ಸ್ವಾಧೀನದಲ್ಲಿರುತ್ತಾರೆ ಅವರು ನನ್ನ ಜಮೀನಿನಲ್ಲಿ ಯಾವುದೇ ಒತ್ತುವರಿ ಮಾಡಿಲ್ಲವೆಂದರೆ ಸರಿಯಲ್ಲ.

ಗಂಗಮ್ಮ ಇವರು ತಮ್ಮ ಜೀವಿತಕಾಲದಲ್ಲಿ ಸದರಿ ವಿಸ್ತೀರ್ಣದ ತಿದ್ದುಪಡಿಗಾಗಿ ಇ ಸಿ ಮತ್ತು ಕ್ರಯಪತ್ರಧಾರದ ಮೇಲೆ ತಹಶೀಲ್ದಾರ್ ಇವರಿಗೆ ಅರ್ಜಿ ನೀಡಿರುತ್ತಾರೆಂದರೆ ಸರಿಯಲ್ಲ. ತಹಶೀಲ್ದಾರ್ ರವರು ದಿಃ05-06-2017 ರಂದು ಹಿಂಬರಹ ನೀಡಿ ಸಕ್ಷಮ ಪ್ರಾಧಿಕಾರದ ಮುಂದೆ ಪರಿಹಾರ ಕಂಡುಕೊಳ್ಳಿ ಅಂತಾ ಪರಿಹಾರ ಸೂಚಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಹಿಂಬರಹದ ಆಧಾರದ ಮೇಲೆ ಪ್ರತಿವಾದಿ ಎ ಸಿ ನ್ಯಾಯಾಲಯದಲ್ಲಿ ಒಂದು ಮೇಲ್ಮನವಿ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿರುತ್ತೇನೆಂದರೆ ಸರಿ ಮತ್ತು ಅದರಲ್ಲಿ ನಾನು ತಕರಾರು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯು ತಮಗೆ ಸೇರಿದ 10 ಎಕರೆ ಜಮೀನಿನಲ್ಲಿ ಸ್ವಾವಧೀನದಲ್ಲಿರುತ್ತಾನೆ ನಮ್ಮ ಜಮೀನನ್ನು ಯಾವುದೇ ರೀತಿಯಿಂದ ಒತ್ತು ಮಾಡಿಲ್ಲವೆಂದರೆ ಸರಿಯಲ್ಲ.

ನಾವು ನನ್ನ ಜಮೀನಿನ ಸ್ವಾಧೀನವನ್ನು ಬಿಟ್ಟುಕೊಡಿ ಅಂತಾ ಪ್ರತಿವಾದಿಗೆ ನಮ್ಮ ಊರಿನ ಹಿರಿಯರ ಮೂಲಕ ಕೇಳಿರುತ್ತೇನೆ ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಗೆ ಜಮೀನನ್ನು ಬಿಟ್ಟುಕೊಡು ಅಂತಾ ಕೇಳಿಲ್ಲ ಕೇವಲ ದಾವೆಯಲ್ಲಿ ಸುಳ್ಳು ಕಾರಣ ತೋರಿಸಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ಜಮೀನನ್ನು ಯಾವುದೇ ರೀತಿಯಿಂದ ಒತ್ತುವರಿ ಮಾಡಿ ಆದರೂ ಸಹಾ ನಾನು ಮತ್ತು ನನ್ನ ಕುಟುಂಬದವರು ಸೇರಿ ಅವನಿಗೆ ತೊಂದರೆ ಕೊಡಲು ಅವನ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ನನ್ನ ಜಮೀನಿನಲ್ಲಿ ಬಾವಿ ಇರುವುದರಿಂದ ಯಾವುದೇ ರೀತಿಯಿಂದ ಸರ್ವೆ ಕಾರ್ಯ ಮಾಡಿಲ್ಲ ಅದನ್ನು ವಿಲೇ ಇಟ್ಟಿರುತ್ತಾರೆ ಆದರೂ ಸಹಾ ನಾನು ಬೇರೆ ಮಾರ್ಗವಿಲ್ಲದೇ ಸುಳ್ಳು ದಾವೆ ದಾಖಲಿಸಿರುತ್ತೇನೆ ಮತ್ತು ಸುಳ್ಳು ಸಾಕ್ಷಿ ಪ್ರಮಾಣಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ